ಕರ್ನಾಟಕ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2020
ಮಾನ್ಯ ಸದಸ್ಯರ ಹೆಸರು	ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	24.03.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿ ಬರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುವ ವಸತಿಗೃಹದಲ್ಲಿ ಕೋವಿಡ್-19 ಮಹಾಮಾರಿ ಖಾಯಿಲೆಗೆ ನೀಡಿರುವ ವಸತಿ ಗೃಹಗಳ ಸಂಖ್ಯೆಗಳೆಷ್ಟು; ಸದರಿ ವಸತಿಗೃಹದಲ್ಲಿ ಇಲ್ಲಿಯವರೆಗೆ ಎಷ್ಟು ಜನ ಕೋವಿಡ್ ನಿಂದ ಬಳಲುತ್ತಿರುವವರನ್ನು ದಾಖಲೆ ಮಾಡಿಸಿಕೊಂಡಿರುತ್ತಾರೆ; ಇವರಿಗೆ ಪ್ರತಿ ಹಂತದಲ್ಲೂ ಆಗಿರುವ ಖರ್ಚು ಎಷ್ಟು; (ಸವಿಸ್ತಾರವಾಗಿ ತಾಲ್ಲೂಕುವಾರು/ ಜಿಲ್ಲಾವಾರು ನೀಡುವುದು)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಕಾರವಾರ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿ ಒಟ್ಟು 101 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, 26 ವಿದ್ಯಾರ್ಥಿನಿಲಯಗಳನ್ನು ಕೋವಿಡ್-19 ಕ್ವಾರಂಟೈನ್ ಕೇಂದ್ರಗಳನ್ನಾಗಿ ಮಾಡಲಾಗಿರುತ್ತದೆ. ಈ ಕ್ವಾರಂಟೈನ್ ಕೇಂದ್ರಗಳಲ್ಲಿ ಕೋವಿಡ್-19 ರೋಗ ಲಕ್ಷಣವಿರುವ ಒಟ್ಟು 1809 ಜನರನ್ನು ಕ್ವಾರಂಟೈನ್ ಮಾಡಲಾಗಿದ್ದು, 35 ಜನ ಸೋಂಕಿನಿಂದ ಬಳಲಿರುತ್ತಾರೆ. ಕ್ವಾರಂಟೈನ್‌ನಲ್ಲಿರುವವರಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಯಾವುದೇ ಖರ್ಚು ಭರಿಸಿರುವುದಿಲ್ಲ. ಸದರಿ ಖರ್ಚು ವೆಚ್ಚವನ್ನು ತಾಲ್ಲೂಕಾ ಮತ್ತು ಜಿಲ್ಲಾಡಳಿತದಿಂದ ಭರಿಸಲಾಗಿದ್ದು, ಖರ್ಚು-ವೆಚ್ಚದ ಮಾಹಿತಿ ಜಿಲ್ಲಾ ಕಛೇರಿಯಲ್ಲಿ ಲಭ್ಯವಿರುವುದಿಲ್ಲವೆಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ-ಕಾರವಾರ ಇವರು ತಿಳಿಸಿರುತ್ತಾರೆ.
ಆ)	ಈಗಾಗಲೇ ಕೋವಿಡ್-19 ಮಹಾಮಾರಿ ಖಾಯಿಲೆ ಸಲುವಾಗಿ ಮಾರ್ಚ್-2020 ರಿಂದ ಜನವರಿ 2021ನೇ ವರೆಗೆ ಬಂದಿರುವ ರೋಗಿಗಳಿಗೆ ವಿಶ್ರಾಂತಿ ಮಾಡಲು ಖರೀದಿಸಿರುವ ಬೆಡ್‌ಗಳ ಸಂಖ್ಯೆ ಎಷ್ಟು; ಸದರಿ ಬೆಡ್-ಗಳನ್ನು ಮುಂದೆ ವಸತಿಗೃಹಗಳಿಗೆ ಬರುವ ವಿದ್ಯಾರ್ಥಿಗಳಿಗೆ ನೀಡುತ್ತೀರೋ ಹೇಗೆ; (ವಿವರ ನೀಡುವುದು)	ಕೋವಿಡ್-19 ಪ್ರಯುಕ್ತ ಕ್ವಾರಂಟೈನ್‌ನಲ್ಲಿರುವವರಿಗಾಗಿ ಬೆಡ್‌ಗಳನ್ನು ಖರೀದಿಸಿರುವುದಿಲ್ಲ. ವಸತಿ ನಿಲಯದಲ್ಲಿರುವ ಒಟ್ಟು 623 ಜಮಖಾನ, 623 ಬೆಡ್‌ಶಿಟ್ ಮತ್ತು 669 ದಿಂಬುಗಳನ್ನು ಕ್ವಾರಂಟೈನ್‌ನಲ್ಲಿರುವವರಿಗೆ ಉಪಯೋಗಿಸಲಾಗಿರುತ್ತದೆ. ವಸತಿನಿಲಯ ಪ್ರಾರಂಭದ ನಂತರ ಸದರಿ ಹಾಸಿಗೆ-ಹೊದಿಕೆಯನ್ನು ವಿದ್ಯಾರ್ಥಿಗಳಿಗೆ ಮರು ಬಳಕೆಗೆ ಉಪಯೋಗಿಸಿರುವುದಿಲ್ಲ.
ಇ)	ಹಾಗಾದರೆ, ಈಗ ಶಾಲಾ ಕಾಲೇಜುಗಳು ಆರಂಭವಾಗಿದ್ದು, ವಿದ್ಯಾರ್ಥಿಗಳು ವಸತಿ ಗೃಹದಲ್ಲಿ ವಾಸ್ತವ್ಯ ಮಾಡಲು ಮುನ್ನೆಚ್ಚರಿಕೆಯಾಗಿ ಕೈಗೊಂಡಿರುವ ಕ್ರಮಗಳೇನು? (ಸವಿಸ್ತಾರ ವರದಿ ನೀಡುವುದು)	ಕ್ವಾರಂಟೈನ್‌ಗಾಗಿ ಉಪಯೋಗಿಸಲಾಗಿದ್ದ ವಸತಿನಿಲಯಗಳನ್ನು SOP ಮಾರ್ಗಸೂಚಿಗನುಗುಣವಾಗಿ ಸಂಪೂರ್ಣವಾಗಿ 3 ಬಾರಿ ಸ್ಯಾನಿಟೈಸೇಶನ್ ಮಾಡಿಸಿ ಕ್ವಾರಂಟೈನ್ ಸಮಯದಲ್ಲಿ ಉಪಯೋಗಿಸಿದ ಎಲ್ಲಾ ವಸ್ತುಗಳನ್ನು ತಾಲ್ಲೂಕು ಕಛೇರಿಗಳಿಂದ ವಿಲೇ ಮಾಡಿಸಲಾಗಿರುತ್ತದೆ. ವಿದ್ಯಾರ್ಥಿನಿಲಯಗಳಲ್ಲಿನ ಎಲ್ಲಾ ಕೊಠಡಿಗಳು, ಊಟದ ಹಾಲ್, ವರಾಂಡಾ ಸುತ್ತ ಮುತ್ತ ಹಾಗೂ ಶೌಚಾಲಯ ಮತ್ತು ಸ್ನಾನ ಗೃಹಗಳನ್ನು ಸ್ವಚ್ಛಗೊಳಿಸಲಾಗಿರುತ್ತದೆ. ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಮಾಸ್ಕ್, ಸ್ಯಾನಿಟೈಜರ್, ಥರ್ಮಲ್ ಪರೀಕ್ಷೆ ಕಡ್ಡಾಯಗೊಳಿಸಿ ಕೋವಿಡ್ -19 ವರದಿ ಪಡೆದು, ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿರುತ್ತದೆ. ಕೋವಿಡ್ -19 ಕುರಿತು ನಿಲಯಗಳಲ್ಲಿ ಭಿತ್ತಿ ಪತ್ರ ಮತ್ತು ಚಾರ್ಟ್‌ಗಳನ್ನು ವಿದ್ಯಾರ್ಥಿಗಳ ತಿಳುವಳಿಕೆಗಾಗಿ ಪ್ರದರ್ಶಿಲಾಗಿದೆ.

ಸಂಖ್ಯೆ:ಹಿಂವಕ 244 ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ